# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1573 |
| ಉತ್ತರಿಸಬೇಕಾದ ದಿನಾಂಕ | : | 18.03.2021. |
| ಸದಸ್ಯರ ಹೆಸರು | : | ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |

| ಕ್ರ ಸ | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ವಿರಾಜಪೇಟೆ ನಗರದ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಮೀಪದಲ್ಲಿ ನಿರ್ಮಾಣಗೊಳ್ಳುತ್ತಿರುವ ಒಳಾಂಗಣ ಕ್ರೀಡಾಂಗಣ ಕಾಮಗಾರಿಯು ಕಳೆದ ಒಂಭತ್ತು ವರ್ಷಗಳ ಹಿಂದೆ ಪ್ರಾರಂಭವಾಗಿದ್ದರೂ ಇದುವರೆವಿಗೂ ಪೂರ್ಣಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಕೊಡಗು ಜಿಲ್ಲೆಯ ವಿರಾಜಪೇಟೆ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮೀಪದಲ್ಲಿ ದಿನಾಂಕ: 12.03.2013ರಂದು ರೂ.326.65 ಲಕ್ಷಗಳ ಅಂದಾಜು ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣದ ಕಟ್ಟಡ ನಿರ್ಮಾಣ, ಗೋಡೆಗಳಿಗೆ ಪ್ಲಾಸ್ಟರಿಂಗ್ ಮಾಡುವುದು, ಎಂ.ಎಸ್. ಟ್ಯೂಬ್ಯೂಲರ್ ಟ್ರಸ್ ಅಳವಡಿಸಿ, ಮೇಲ್ಛಾವಣಿಯಾಗಿ ಜಿ.ಐ. ಶೀಟ್ಸ್ ಅಳವಡಿಸುವುದು, ಕಿಟಕಿ, ಬಾಗಿಲುಗಳನ್ನು ಅಳವಡಿಸುವುದು, ಶೌಚಾಲಯಗಳ ನಿರ್ಮಾಣ, ಬಣ್ಣ ಬಳಿಯುವುದು ಹಾಗೂ ಇತರೆ ಸಿವಿಲ್ ಕಾಮಗಾರಿಯನ್ನು ನಿರ್ವಹಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಲಭ್ಯ ಅನುದಾನದ ಮಿತಿಯಲ್ಲಿ ಕಾಮಗಾರಿಯನ್ನು ಅನುಮೋದಿಸಿದ್ದು, ಅನುಮೋದಿತ ಅಂದಾಜಿನ ಅನ್ವಯ (scope of work) ಕಾಮಗಾರಿ ಪ್ರಸ್ತುತ ಪೂರ್ಣಗೊಂಡಿದೆ.<br><br>ಟೆಂಡರ್‌ನಲ್ಲಿ ಸೇರ್ಪಡೆಗೊಳ್ಳದ 1)ವಿದ್ಯುತ್ ಕಾಮಗಾರಿ 2) ಟರ್ಬೋ ವೆಂಟಿಲೇಟರಗಳನ್ನು ಅಳವಡಿಸುವುದು 3) ನೀರು ಸರಬರಾಜು ಮತ್ತು 4) ಕೂಡುರಸ್ತೆ ಹಾಗೂ ಒಳಾಂಗಣ ಕ್ರೀಡಾಂಗಣ ಕಟ್ಟಡದ ಸುರಕ್ಷತೆಯ ದೃಷ್ಟಿಯಿಂದ ಕಟ್ಟಡದ ಬಲಭಾಗಕ್ಕೆ ಆರ್.ಸಿ.ಸಿ. ತಡೆಗೋಡೆ ನಿರ್ಮಿಸುವುದು ಅವಶ್ಯಕವಾಗಿದ್ದು, ಹೆಚ್ಚುವರಿ ಅನುದಾನದ ಅಗತ್ಯವಿರುತ್ತದೆ. |
| ಆ) | ಬಂದಿದ್ದಲ್ಲಿ, ಸದರಿ ಕಾಮಗಾರಿಯು ಇಷ್ಟು ದೀರ್ಘಕಾಲದಿಂದ ಪೂರ್ಣಗೊಳ್ಳದೇ ಇರಲು ಕಾರಣಗಳೇನು; | ಮರಳಿನ ಅಭಾವದಿಂದಾಗಿ ಹಾಗೂ ಮಲೆನಾಡು ಭಾಗವಾದ್ದರಿಂದ ಅಕಾಲಿಕ ಮಳೆಯಿಂದಾಗಿ ಕಾಮಗಾರಿಯ ಪ್ರಗತಿಯು 2015 ರಿಂದ 2018 ರವರೆಗೆ ಕುಂಠಿತಗೊಂಡಿರುತ್ತದೆ. ಗುತ್ತಿಗೆದಾರರಿಗೆ ಈ ಬಗ್ಗೆ ನೋಟೀಸ್ ಗಳನ್ನು ಜಾರಿ ಮಾಡಲಾಗಿದ್ದು, ಟೆಂಡರ್‌ನಲ್ಲಿ ಇಡಲಾಗಿದ್ದ ಐಟಂ ಮತ್ತು ದರಗಳನ್ವಯ 2019ನೇ ಸಾಲಿನಲ್ಲಿ ಒಳಾಂಗಣ ಕ್ರೀಡಾಂಗಣ ಕಾಮಗಾರಿಯನ್ನು ಗುತ್ತಿಗೆದಾರರು ಪೂರ್ಣಗೊಳಿಸಿರುತ್ತಾರೆ. ಅನುದಾನದ ಕೊರತೆಯಿಂದಾಗಿ ಹೆಚ್ಚುವರಿ ಅಗತ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ. |

--2)

<table>
<tr>
<td>ಇ)</td>
<td>ಸದರಿ ಕಾಮಗಾರಿಯ ಅಂದಾಜು ಮೊತ್ತ, ಬಿಡುಗಡೆಯಾಗಿರುವ ಹಾಗೂ ಖರ್ಚಾಗಿರುವ ಅನುದಾನದ ಸಂಪೂರ್ಣ ವಿವರ ನೀಡುವುದು;</td>
<td>ಕಾಮಗಾರಿಯ ಕಾರ್ಯಾದೇಶದ ಮೊತ್ತ ರೂ326.65 ಲಕ್ಷಗಳಾಗಿದ್ದು, ಇದುವರೆಗೆ ಒಟ್ಟು ರೂ.325.58 ಲಕ್ಷಗಳನ್ನು ಗುತ್ತಿಗೆದಾರರಿಗೆ ಬಿಡುಗಡೆ ಮಾಡಲಾಗಿದೆ; ವಿವರ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ಬಿಲ್ಲಿನ ವಿವರ</th><th>ಪಾವತಿ ಮಾಡಿದ ದಿನಾಂಕ</th><th>ಮೊತ್ತ (ರೂಗಳಲ್ಲಿ)</th></tr>
<tr><td>1.</td><td>1st R.A. Bill</td><td rowspan="2">12.03.2014</td><td>20,24,463.00</td></tr>
<tr><td>2.</td><td>2nd R.A. Bill</td><td>22,99,424.00</td></tr>
<tr><td>3.</td><td>3rd R.A. Bill</td><td>28.06.2014</td><td>35,75,822.00</td></tr>
<tr><td>4.</td><td>4th R.A. Bill</td><td>20.11.2014</td><td>16,67,037.00</td></tr>
<tr><td>5.</td><td>5th R.A. Bill</td><td>13.03.2015</td><td>24,08,758.00</td></tr>
<tr><td>6.</td><td rowspan="2">6th R.A. Bill</td><td>16.01.2019</td><td>50,00,000.00</td></tr>
<tr><td>7.</td><td>23.03.2019</td><td>24,32,785.00</td></tr>
<tr><td>8.</td><td rowspan="3">7th R.A Bill</td><td>19.08.2019</td><td>50,00,000.00</td></tr>
<tr><td>9.</td><td>29.11.2019</td><td>25,00,000.00</td></tr>
<tr><td>10.</td><td>24.02.2020</td><td>56,49,352.00</td></tr>
<tr><td></td><td></td><td>ಒಟ್ಟು</td><td>3,25,57,641.00</td></tr>
</table>
</td>
</tr>
<tr>
<td>ಈ)</td>
<td>ಯಾವ ಕಾಲಮಿತಿಯೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸಿ, ಲೋಕಾರ್ಪಣೆಗೊಳಿಸಲಾಗುವುದು?</td>
<td>ವಿರಾಜಪೇಟೆ ಒಳಾಂಗಣ ಕ್ರೀಡಾಂಗಣಕ್ಕೆ ಸಂಬಂಧಿಸಿದಂತೆ ವಿದ್ಯುತ್ ಕಾಮಗಾರಿ, ಟರ್ಬೋ ವೆಂಟಿಲೇಟರಗಳನ್ನು ಅಳವಡಿಸುವುದು, ನೀರು ಸರಬರಾಜು ಮತ್ತು ಕೂಡುರಸ್ತೆ ಹಾಗೂ ಒಳಾಂಗಣ ಕ್ರೀಡಾಂಗಣ ಕಟ್ಟಡದ ಸುರಕ್ಷತೆಯ ದೃಷ್ಠಿಯಿಂದ ಕಟ್ಟಡದ ಬಲ ಭಾಗಕ್ಕೆ ಆರ್.ಸಿ.ಸಿ. ತಡೆಗೋಡೆ ನಿರ್ಮಿಸುವ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಈ ಬಗ್ಗೆ ರೂ.91.20 ಲಕ್ಷ ವೆಚ್ಚದ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಅನುದಾನದ ಲಭ್ಯತೆ ಆಧರಿಸಿ, 2021-22ನೇ ಸಾಲಿನಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ, ಲೋಕಾರ್ಪಣೆಗೊಳಿಸುವ ಬಗ್ಗೆ ಕ್ರಮವಹಿಸಲಾಗುವುದು.</td>
</tr>
</table>

**ವೈಎಸ್‌ಡಿ-ಇಬಿಬಿ/62/2021.**

**(ಡಾ|| ನಾರಾಯಣ ಗೌಡ)**
ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.